ಉಪಾಧ್ಯಕ್ಷರು : ಮಂತ್ರಿಗಳು ಸರಿಯಾಗಿ ಉತ್ತರ ಕೊಟ್ಟಿದ್ದಾರೆ. ಈಗ ತಾವು ಕೂಡಿ . ಈಗ ಶಾಸನರಚನೆ. ವಿಧೇಯಕವನ್ನು ಮಂಡಿಸುವುದು. ಕರ್ನಾಟಕ ಧನವಿನಿಯೋಗ ವಿಧೇಯಕ 1997.

ಶ್ರೀ ಸಿ.ಹೆಚ್. ವಿಜಯಶಂಕರ : ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಸಮರ್ಪಕವಾಗಿಲ್ಲ.

(ಗೊಂದಲ)

ಉಪಾಧ್ಯಕ್ಷರು : 1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು. ತಾವು ಪ್ರಸ್ತಾಪ ಮಾಡಿ.

(ಗೊಂದಲ)

ಉಪಾಧ್ಯಕ್ಷರು : ಅದೆಲ್ಲಾ ಸಾಧ್ಯವಿಲ್ಲ. ಅದೆಲ್ಲಾ ಮಾಡಬಾರದು. ಆ ತರಹ ಮಾಡಿದರೆ ಹೇಗೆ? ತಾವು ದಯಮಾಡಿ ಕೂಡಿ ನಾನು ಹೇಳುತ್ತೇನೆ. ಈ ತರಹ ಎಂಟು ಹತ್ತು ಜನ ಎದ್ದು ನಿಂತು ಮಾತನಾಡಿದರೆ ಯಾರು ಉತ್ತರ ಕೊಡುತ್ತಾರೆ? ಸಭೆಯ ಶಿಸ್ತು ನಿಯಮಾವಳಿಗಳನ್ನು ಕಲಿತುಕೊಂಡು ತಾವು ಒಳಗಡೆ ಬರಬೇಕು. ತಾವೆಲ್ಲಾ ಈ ರೀತಿ ಮಾಡಿದರೆ ಹೇಗೆ? ಮಂತ್ರಿಗಳು ಉತ್ತರ ಹೇಳಿದ್ದಾರೆ. ಆದರೆ ಪದೇ ಪದೇ 8-10 ಜನ ಎದ್ದುನಿಲ್ಲುತ್ತೀರಿ. ದಯಮಾಡಿ ಕೂಡ್ರಿ. ಈ ರೀತಿ ಮಾಡುವುದಕ್ಕಾಗುವುದಿಲ್ಲ.

ವಿತ್ತೀಯ ಕಾರ್ಯಕಲಾಪ

1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, "1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ".

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"1997ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ.ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1997ರ ಕರ್ನಾಟಕ ಧನವಿನಿಯೋಗ * ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಪ್ರಸ್ತಾವ ಮಂಡಿಸಲ್ಪಟ್ಟಿತು)

---

* ಅನುಬಂಧ - I

ಶ್ರೀ ಕಾಗೋಡು ತಿಮ್ಮಪ್ಪ : ಪರ್ಯಾಲೋಚನೆ ಮಾಡುವುದಕ್ಕಿಂತ ಮುಂಚಿತವಾಗಿ ಸಚಿವರು ವಿವರಣೆಯನ್ನು ಕೊಡಬೇಕು.

ಪರ್ಯಾಲೋಚನಾ ಪ್ರಸ್ತಾವ

(1) 1997ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕ

+ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಈಗ ಧನವಿನಿಯೋಗ ಮಸೂದೆಯನ್ನು ಪರ್ಯಾಲೋಚಿಸಬೇಕು ಎಂದು ತಾವು ಅನುಮತಿ ಕೊಟ್ಟಿದ್ದೀರಿ. ಇದರಲ್ಲಿ ಚರ್ಚೆ ಮಾಡತಕ್ಕದ್ದು ಏನೂ ಇಲ್ಲ. ನಿನ್ನೆ 1996-97ನೇ ಅಂದಾಜು ಪೂರಕಗಳ ಬಗ್ಗೆ ಎರಡನೇ ಕಂತಿಗೆ ಸಂಬಂಧಪಟ್ಟಹಾಗೆ ಈ ಸದನದಲ್ಲಿ ತಾವು ಮತ್ತು ಇನ್ನು ಕೆಲವು ಸದಸ್ಯರು ಭಾರಿ ಪ್ರಮಾಣದ ದೊಡ್ಡ ಚರ್ಚೆಯನ್ನು ನೀವು ಮಾಡಿರತಕ್ಕ ಸೂಚನೆಗಳು ನಿಮ್ಮ ತೀವ್ರತರವಾದ ಟೀಕೆಗಳು ಇವೆಲ್ಲವನ್ನೂ ನಾವು ಸ್ವೀಕಾರ ಮಾಡಿದ್ದೇವೆ. ಕಡೆಗೂ ನೀವು ನಮಗೆ ಕೆಲವು ಸೂಚನೆಗಳನ್ನು ಕೊಟ್ಟಿದ್ದೀರಿ. ನೀವು ಹಣವನ್ನು ಖರ್ಚು ಮಾಡುತ್ತಾ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ರಾಜ್ಯಾಂಗದ 205ನೇ ವಿಧಿಯನ್ನು ಬಳಸುತ್ತಾ ಇರತಕ್ಕ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ನಿಗಾ ವಹಿಸಿಬೇಕು. ಎಚ್ಚರ ವಹಿಸಬೇಕು ಎಂದು ಹೇಳುತ್ತಾ ಇರತಕ್ಕದ್ದು ಸರಿ. ಮಾನ್ಯ ವೈ. ರಾಮಕೃಷ್ಣ ಅವರು ಕೂಡ ಈ ಹಿಂದೆ ಸದನದಲ್ಲಿ ಪಾರ್ಲಿಮೆಂಟರಿ ಸಚಿವರಾಗಿ ಕೆಲಸ ಮಾಡಿರತಕ್ಕ ಸಂದರ್ಭದಲ್ಲಿ ವಿರೋಧಪಕ್ಷದಿಂದ ನಾವು ಇದೇ ಪ್ರಕಾರವಾಗಿ ವಿಚಾರಗಳನ್ನು ಎತ್ತಿದಾಗಲೂ ಕೂಡ ಅವರೂ ಸಹ ಇದೇ ತರಹದ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದರೆ ನಾವು ಒಂದನ್ನು ಏನು ಗಮನಿಸಬೇಕು ಎಂದರೆ ಹಲವಾರು ಸಂದರ್ಭದಲ್ಲಿ ನಾವು ಮುಂಗಡಪತ್ರವನ್ನು ಮಂಡಿಸತಕ್ಕ ಸಂದರ್ಭದಲ್ಲಿ ಒಂದು ವರ್ಷದೊಳಗೆ ನಾವು ತೆಗೆದಕೊಳ್ಳಬೇಕಾದ ಹಲವಾರು ವಿಚಾರಗಳನ್ನು ಹಲವಾರು ಯೋಜನೆಗಳನ್ನು ನಾವು ಸ್ವಲ್ಪಮಟ್ಟಿಗೆ ಪೂರ್ವಭಾವಿಯಾಗಿ ಯೋಚಿಸಿ ಅದಕ್ಕೆ ಸಂಬಂಧಪಟ್ಟ ಯೋಜನೆಗಳನ್ನು ರೂಪಿಸಿ ಅದಕ್ಕೆ ಹಣವನ್ನು ಒದಗಿಸಬೇಕಾಗುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಆದಾದಮೇಲೆ ನಾವು ಮುಂಗಡಪತ್ರವನ್ನು ಮಂಡಿಸಿ ಆದಮೇಲೆ ಹೊಸ ಹೊಸ ಕೆಲವು ಯೋಜನೆಗಳು ಬರುತ್ತಾ ಇರತಕ್ಕ ಸಂದರ್ಭಗಳೂ ಬರುತ್ತವೆ. ಅಂಥ ಸಂದರ್ಭದಲ್ಲಿ ಮಾತ್ರ ನಾವು ಈ ಪೂರಕ ಅಂದಾಜುಗಳ ಮುಖಾಂತರ ಅದಕ್ಕೆ ನಾವು ಹಣವನ್ನು ಒದಗಿಸಬೇಕು. ಯಾವುದೇ ಹಣವನ್ನು ಒದಗಿಸಬೇಕಾದರೆ ಈ ಸದನದ ಅನುಮತಿ ಇಲ್ಲದೆ ಒದಗಿಸುವುದಕ್ಕೆ ಸಾಧ್ಯವೇ ಇಲ್ಲ. ಆದರೆ 205ನೇ ವಿಧಿಯನ್ನು ನಾವು ಬಹಳ ಸ್ಪೇರಿಂಗಾಗಿ ಉಪಯೋಗ ಮಾಡಬೇಕೆಂದು ಕೂಡ ಹೇಳುತ್ತಾರೆ. ಅದರ ಜೊತೆಯಲ್ಲೇ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಯಾವುದಿದೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ಹೇಳತಕ್ಕಂಥದ್ದು ಕೆಲವು ಸಂದರ್ಭಗಳಲ್ಲಿ ಈ ಯೋಜನೇತರ ವೆಚ್ಚಗಳನ್ನು ಬಹಳಷ್ಟು ಕಡಿಮೆ ಮಾಡತಕ್ಕದ್ದೂ ಕೂಡ ನಮ್ಮ ನಿಮ್ಮೆಲ್ಲರ ಚಿಂತನೆ. ಅದರ ಜೊತೆಯಲ್ಲಿ ನಾನ್ ಪ್ಲಾನ್ ಎಕ್ಸಪೆಂಡಿಚರ್ ಯಾವುದು ಇದೆ, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ಹೇಳುವುದು ಕೆಲವು ಸಂದರ್ಭಗಳಲ್ಲಿ ಯೋಜನೇತರ ವೆಚ್ಚಗಳು ಅದನ್ನು ಬಹಳಷ್ಟು ಕಡಿಮೆ ಮಾಡಬೇಕಾಗಿರುವುದು ಕೂಡ ನಮ್ಮ ನಿಮ್ಮೆಲ್ಲರ ಚಿಂತನೆ. ಯೋಜನೇತರ ವೆಚ್ಚ ಕಡಿಮೆಯಾದಾಗ ಮಾತ್ರ ಆ ಹಣವು ಅಭಿವೃದ್ಧಿ

ಕೆಲಸಕ್ಕೆ ಒಂದು ಸಹಾಯವಾಗುತ್ತದೆ ಎನ್ನುವ ವಿಚಾರದಲ್ಲಿ ನಿನ್ನೆ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಯಾವುದು ಇತ್ತು. ಅದಕ್ಕೆ ಸಂಬಂಧಪಟ್ಟ ಹಾಗೆ ಯಾವ ಯಾವ ಇಲಾಖೆಗಳಿಗೆ ವರ್ಗಾಯಿಸಬೇಕು ಮತ್ತು ಪೆಚ್ಚಿನ ಹಣವನ್ನು ಆ ದಿಸೆಯಲ್ಲಿ ಒದಗಿಸಬೇಕಾಗುತ್ತದೆ. ಮತ್ತು ಅದರ ಜೊತೆಯಲ್ಲಿ ನಮ್ಮ ಇಲಾಖೆಗಳಲ್ಲಿರುವ ಲೆಕ್ಕಗಳ ಹೊಂದಾಣಿಕೆ ಇದರಲ್ಲಿ ಸೇರಿರುವ ಹಣ 219 ಲಕ್ಷ ರೂಪಾಯಿಗಳು. ಇದರ ಬಗ್ಗೆ ಕೂಡ ನಿನ್ನೆ ಸದನದಲ್ಲಿ ಚರ್ಚೆ ಮಾಡಿದ್ದೀರಿ. ಇಲಾಖೆಗಳಿಗೆ ಹೊಂದಾಣಿಕೆ ಆಗುತ್ತಿರುವುದು ಸುಮಾರು 128.28 ಕೋಟಿ ರೂಪಾಯಿಗಳು. 218.64 ಕೋಟಿ ರೂಪಾಯಿಗಳಲ್ಲಿ 128.28 ಕೋಟಿ ರೂಪಾಯಿಗಳು ಇಲಾಖೆಗಳ ಮಧ್ಯೆ ಹೊಂದಾಣಿಕೆ ಇರುವಂಥದ್ದು. ಮತ್ತು ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ನಲ್ಲಿ ಕೇಂದ್ರ ಸರ್ಕಾರದಿಂದ ಬರುವ ಸಹಾಯ ಬೇರೆ ಇದೆ. ಅದು 21.29 ಕೋಟಿ ರೂಪಾಯಿಗಳು. ಕೇಂದ್ರ ಸರ್ಕಾರದಿಂದ ಬರುವ ಹಣವನ್ನು ಕೊಡಬೇಕಾಗುತ್ತದೆ. ಅದನ್ನು ರೀ-ಇಂಬರ್ಸ್ ಮಾಡಬೇಕಾಗುತ್ತದೆ ಕಡೆಗೆ ನೆಟ್ ಔಟ್‌ಗೋ ಕನ್‌ಸಾಲಿಡೇಟೆಡ್ ಹಣ ಎಷ್ಟು ಬಿಡುಗಡೆಯಾಗುತ್ತದೆ ಎಂದು ಹೇಳಿದರೆ 69 ಕೋಟಿ ರೂಪಾಯಿಗಳು. ನಿನ್ನೆ ಇದರ ಬಗ್ಗೆ ವ್ಯಾಪಕವಾಗಿರುವ ಚರ್ಚೆ ಮಾಡಿದ್ದೀರಿ. ವ್ಯಾಪಕವಾಗಿರುವ ಚರ್ಚೆಯನ್ನು ಮಾಡಿ ಪೂರಕ ಅಂದಾಜುಗಳಿಗೆ ಈ ಒಂದು ಸದನವು ಸಂಪೂರ್ಣ ಒಪ್ಪಿಗೆಯನ್ನು ಕೊಟ್ಟ ಮೇಲೆ ಪೂರಕ ಅಂದಾಜುಗಳಿಗೆ ಸಂಬಂಧಪಟ್ಟಿರುವ ಧನ ವಿನಿಯೋಗ ಮಸೂದೆಯನ್ನು ಮಂಡಿಸುತ್ತಿದ್ದೇನೆ. ನಿನ್ನೆ ಚರ್ಚೆ ಮಾಡಿದ ಮಸೂದೆಗೆ ಅಂಗೀಕಾರ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಫೈನಾನ್ಸ್ ಬಿಲ್ಸ್ ಯಾವುದು ಇದೆ, ಅದಕ್ಕೆ ಅಂಗೀಕಾರವನ್ನು ಕೊಡಲೇಬೇಕು, ಅದು ಸಂಸದೀಯ ಪದ್ಧತಿಯಲ್ಲಿ ನಡೆದುಕೊಂಡು ಬಂದಿರುವ ಪದ್ಧತಿ. ಮತ್ತು ನಾವು ಕೊಟ್ಟಿರುವ ತೀಕ್ಷ್ಣವಾಗಿರುವ ಟೀಕೆಗಳ ಬಗ್ಗೆಯೂ ಮತ್ತು ಸಲಹೆಗಳ ಬಗ್ಗೆಯೂ ಸರ್ಕಾರ ಗಮನ ಹರಿಸುತ್ತದೆ. ಮತ್ತು ಯೋಜನೇತರ ವೆಚ್ಚಗಳನ್ನೂ ಕೂಡ ಕಡಿಮೆ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ. ಮತ್ತು ನಿಮ್ಮಗಳ ಸಲಹೆಗಳನ್ನು ಸ್ವೀಕಾರ ಮಾಡಿದ್ದೇನೆ.

+ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಉಪಾಧ್ಯಕ್ಷರೇ, ಸ್ಪೆಷಲ್ ಕಾಂಪೊನೆಂಟ್ ಪ್ಲಾನ್ ಇರುವುದೇ ಇಡೀ ಭಾರತ ದೇಶಕ್ಕೆ ಎಂದು ತಾವು ಒಪ್ಪುತ್ತೀರಿ. ಇದು ಎಲ್ಲಾ ರಾಜ್ಯಗಳಿಗೂ ಅನ್ವಯಿಸುತ್ತದೆ. ಆಂಧ್ರಕ್ಕೆ ಒಂದು ಇಲ್ಲ, ಮದ್ರಾಸ್‌ಗೆ ಒಂದು ಇಲ್ಲ, ಗುಜರಾತ್‌ಗೆ ಒಂದು ಇಲ್ಲ, ಮಧ್ಯಪ್ರದೇಶಕ್ಕೆ ಒಂದು ಇಲ್ಲ. ಅಂದ ಮೇಲೆ ಅದರ ಅಗತ್ಯ ಕಂಡೇ ಗ್ರಾಂಟ್‌ನ್ನು ಕೊಡುತ್ತಾರೆ. ಇಡೀ ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿರುವ ಹಣವನ್ನು ವಿತ್‌ಡ್ರಾ ಮಾಡಿ, ಆ ಹಣವನ್ನೆಲ್ಲಾ ತೆಗೆದುಕೊಂಡು ಬೇರೆಯದಕ್ಕೆ ನೀವು ಉಪಯೋಗ ಮಾಡುವುದಕ್ಕೆ ತಮಗೆ ಅಧಿಕಾರವಿದೆಯೇ? ಇದನ್ನು ನಾನು ಸಿಟ್ಟಿನಿಂದ ಕೇಳುತ್ತಿದ್ದೇನೆ ಎಂದು ತಾವು ದಯವಿಟ್ಟು ಭಾವಿಸಿಕೊಳ್ಳಬಾರದು. ತಮಗೆ ಗೊತ್ತಿರುವ ಹಾಗೆ ಈ ದೇಶದ ಎಲ್ಲಾ ಮುಖ್ಯಕಾರ್ಯದರ್ಶಿಗಳು ಸೇರಿ ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಾಂಪೊನೆಂಟ್ ಪ್ಲಾನ್ ಮಾಡಿದರು. ಅಂದರೇನು? ಬರೀ ಮನೆಗಳನ್ನು ಕೊಟ್ಟರೆ ಆಗುವುದಿಲ್ಲ. ಅಭಿವೃದ್ಧಿ ಇಲಾಖೆಯಲ್ಲಿ ಅವರಿಗೆ ಸಲ್ಲಬೇಕಾದ ಪಾಲು ಸಲ್ಲಬೇಕು ಎಂದು ಅವರು ಕಾಂಪೊನೆಂಟ್ ಕಂಟಿಂಜೆಂಟ್ ಪ್ಲಾನ್‌ನಲ್ಲಿ ಏನು ಮಾಡಿದ್ದೀರಿ? ಬರೀ ಮನೆ ಕಟ್ಟುವುದು. ದಯವಿಟ್ಟು ನೋಡಿ. 100 ಮನೆಗಳನ್ನು ನೀವು ಈಗ ಕೊಟ್ಟಿದ್ದೀರಿ. ನಮ್ಮ ತಾಲ್ಲೂಕಿನಲ್ಲಿ 300 ಹಳ್ಳಿಗಳು ಇವೆ. ಅಲ್ಲಿ ಮೂರು ಹಳ್ಳಿಗೆ ಒಂದು ಮನೆಯನ್ನು

ಕಟ್ಟಿದ ಎಸ್‌ಸಿ/ಎಸ್‌ಟಿ ಪ್ರಾಬ್ಲಮ್ ಸಾಲ್ವ ಆಯಿತೇ? ಅದಕ್ಕೋಸ್ಕರ ಇದನ್ನು ಗಮನದಲ್ಲಿಟ್ಟು ಕೊಂಡು ಐದು ಸಾವಿರ ಜನ ಬಿಇ ಓದಿರುವವರು ಇದ್ದಾರೆ. ಅವರಿಗೆ ಸಲಕರಣೆಗಳನ್ನು ಕೊಡಿಸಬಹುದಲ್ಲಾ ಎಂ.ಎ. ಓದಿರುವವರು ಮೂರು ಸಾವಿರ ಜನ ಇದ್ದಾರೆ. ಐದು ಸಾವಿರ ಮೂರು ನೂರು ಜನ ಬರೀ ಇಂಜನಿಯರುಗಳು ಕಳೆದ ಹತ್ತು ವರ್ಷಗಳಿಂದ ಇದ್ದಾರೆ. ಅವರ ಕಡೆ ಏನೂ ಮಾಡದೇ ಸುಮ್ಮನೆ ಇದ್ದೀರಾ. ಎಂ.ಎ. ಓದಿರುವವರಿಗೆ ಸ್ಟೈಪೆಂಡರಿ 300 ರೂ.ಕೊಡಿ. ಅಂಥದ್ದಕ್ಕೆ ಹಣ ಖರ್ಚು ಮಾಡಿ. ಜನಗಳಿಗೆ ನೀವು ಕೊಡಬೇಕು, ಹರಿಜನರನ್ನು ನೀವು ಉದ್ಧಾರ ಮಾಡಬೇಕು ಎಂದು ಹೇಳಿದರೆ ಮೂರು ಹಳ್ಳಿಗೆ ಒಂದು ಮನೆ ಕಟ್ಟಿಸಿ ಕೊಡುತ್ತೇನೆ, ಅದಕ್ಕೋಸ್ಕರ ಅಪ್ರೋಪ್ರಿಯೇಟ್ ಮಾಡಿದ್ದೇನೆ ಎಂದು ಹೇಳುವುದು ಎಷ್ಟು ಸೂಕ್ತ? ಎರಡನೆಯದಾಗಿ ಪೇಜ್ 32 ರಲ್ಲಿ ಏನು ಹೇಳಿದ್ದೀರಿ, ಇದರಲ್ಲಿ ಇದ್ದಂಥ ಹಣವನ್ನು ಎಲ್ಲಾ ವಿತ್‌ಡ್ರಾ ಮಾಡಿದ್ದೀರಿ. ಎಷ್ಟೆಂದರೆ 118.68 ಕೋಟಿ ರೂಪಾಯಿಗಳು. ಅಷ್ಟನ್ನು ರೀ ಅಪ್ರೋಪ್ರಿಯೇಟ್ ಮಾಡಿದ್ದೀರಾ? ನೀವು ಮಾಡದಿರುವುದು ಎಷ್ಟು? ಹತ್ತು ಕೋಟಿ ಮನೆಗೆ, ಒಂದು ಕೋಟಿ ಆಶ್ರಯ ಸ್ಕೀಮಿಗೆ, 10 ಕೋಟಿ ಗಂಗಾಕಲ್ಯಾಣಕ್ಕೆ ಕನ್ಸ್‌ಟ್ರಕ್ಷನ್ಸ್‌ಗೆ 4 ಕೋಟಿ, ಉಳಿದ ಹಣ ಏನಾಯಿತು? ನಿಮ್ಮ ಪುಸ್ತಕದಲ್ಲೇ ಇದೆ ಎಷ್ಟು ವ್ಯತ್ಯಾಸವಾಗುತ್ತದೆ. ಇವರ ಕಲ್ಯಾಣಕೋಸ್ಕರ ಇಷ್ಟಂಥ ಹಣವನ್ನು ಎಲ್ಲಿ ನೀವು ಖರ್ಚು ಮಾಡುವುದು? ಎಲ್ಲಿ ಪ್ರಾವಿಷನ್ ಮಾಡಿದ್ದೀರ? ತಾವು ತೆಗೆದುಕೊಂಡು ನೋಡಿ. ಇದನ್ನು ಸರಿ ಮಾಡಿ ಎಂದು ಹೇಳಿದೆ. ನಾನು ಸಿಟ್ಟು ಮಾಡಿಕೊಳ್ಳುವುದು, ಕೋಪ ಮಾಡಿಕೊಳ್ಳುವುದು, ನನ್ನ ಸ್ವಂತದ್ದು ಏನಾಗಬೇಕು? ಅದಕ್ಕೋಸ್ಕರ ಇದನ್ನು ಯಾರಾದರೂ ನೋಡಿದರೆ ಏನಾಗುತ್ತದೆ. It is a reflection to the Karnataka. ಮೊನ್ನೆ ಎಸ್‌ಸಿ/ಎಸ್‌ಟಿ ಕಮೀಷನ್ ರಿಪೋರ್ಟ್ ಓದಿದೆ. ಎತಕ್ಕೆ ಓದಿದೆ? ಸರಿಮಾಡಿಕೊಳ್ಳಲಿ ಎಂದು ಓದಿದೆ. ಈಗ ಅವರ ರಿಪೋರ್ಟ್‌ನಲ್ಲಿ ಬಂದಿರುವ ಹಾಗೆ ಕುಡಿಯುವ ನೀರು ಎಲ್ಲಿ ಇಲ್ಲ ಅಲ್ಲಿ ಕೊಡಿ ಎಂದು ಹೇಳಿದ್ದಾರೆ. ತಾವು ಅದನ್ನು ಪ್ರೊವೈಡ್ ಮಾಡಬಹುದಾಗಿತ್ತು. ಅವರು ಎಷ್ಟು ಸಾವಿರ ಕೇಸ್‌ಗಳು ಇದೆ ಎಂದು ಹೇಳಿದ್ದಾರೆ. ಅದಕ್ಕೆ ಹಣ ಖರ್ಚು ಮಾಡಿ ಇರುವ ಹಣವನ್ನು ಎಸ್‌ಸಿ/ಎಸ್‌ಟಿ ಸದಸ್ಯರಿಗೆ ಕೊಡುವುದಕ್ಕೆ ಆಲೋಚನೆ ಮಾಡಬೇಕೇ ಹೊರತು ಹೌಸಿಂಗ್ ಸ್ಕೀಮ್ ಒಂದೇ ಒಂದು ಹಾಕಿ ಇರುವ ಹಣವನ್ನೆಲ್ಲವನ್ನೂ ತೆಗೆದಿದ್ದು ಅಷ್ಟು ಸಮಂಜಸವಲ್ಲ. ದಯವಿಟ್ಟು ಅದನ್ನು ಪುನರ್ ಪರಿಶೀಲನೆ ಮಾಡಿ. ಬಹುಶಃ ನಾನೇನಾದರೂ ತಪ್ಪು ಮಾಡಿದರೆ ಏನು ಶಿಕ್ಷೆಗೆ ಬೇಕಾದರೂ ಒಳಗಾಗುವುದಕ್ಕೆ ನಾನು ತಯಾರಾಗಿದ್ದೇನೆ. ಹಣ ಉಳಿದಿದೆಯಲ್ಲಾ, 58 ಪರ್ಸೆಂಟ್ ಹಣವನ್ನು ನೀವು ಖರ್ಚು ಮಾಡಿಲ್ಲ. ನಿನ್ನೆ ಪ್ರಶ್ನೋತ್ತರದಲ್ಲಿ ಬಂದಿದೆ. ನಿಮಗೆ ಗಾಬರಿಯಾಗಿದೆ, ಖರ್ಚು ಆಗುವುದಿಲ್ಲ. ಹಣ ಏನು ಮಾಡುವುದು, ಇವರು ಪುನಃ ನಮ್ಮ ಮೇಲೆ ಬೀಳುತ್ತಾರಲ್ಲ, ಏನು ಮಾಡುವುದು, ಅದಕ್ಕೋಸ್ಕರ ತೆಗದು ಬೇಗ ಮನೆಗಳನ್ನು ಕಟ್ಟಿಸಿಬಿಡೋಣ ಅಂತ Your intention is good, but the object is defeated ಇವುಗಳ ಕಡೆಗೆ ತಾವು ಗಮನ-ಹರಿಸಿ ಮುಂದಿನ ಕಾರ್ಯಕ್ರಮವನ್ನು ಹಾಕಿಕೊಳ್ಳಿ.

+ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೇ, ರಾಜ್ಯಾಂಗದತ್ತವಾದ ಹಕ್ಕಿನಲ್ಲಿ ಇದಕ್ಕೆ ಅವಕಾಶ ಇಲ್ಲ. ಈಗೇನು ಸನ್ಮಾನ್ಯ ಕಾನೂನು ಮಂತ್ರಿಗಳು ಮಸೂದೆ ತಂದು ನಮ್ಮನ್ನು ಒಪ್ಪಿಗೆ ಕೇಳುತ್ತಿದ್ದಾರೆ, ಇದರ ಒಪ್ಪಿಗೆ ಅರ್ಥವೇನೆಂದರೆ 118 ಕೋಟಿ ಡೈವರ್ಟ್ ಮಾಡಿ ಸ್ಪೆಷಲ್

ಕಾಂಪೊನೆಂಟ್ ಪ್ಲಾನ್‌ನಲ್ಲಿ ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಮತ್ತು ಸ್ಪೆಷಲ್ ಟ್ರೈಬಲ್ ಪ್ಲಾನ್‌ನಲ್ಲಿ ಬಂದಿರುವ ಹಣವನ್ನು ಡೈವರ್ಟ್ ಮಾಡಿ ಬೇರೆ ಇಲಾಖೆಗಳಿಗೆ ಹಣ ಕೊಟ್ಟು ಉಪಯೋಗ ಮಾಡು ವುದಕ್ಕೆಂದು ಅವರೇನು ಕೇಳುತ್ತಿದ್ದಾರೆ, ಇದು ರಾಜ್ಯಾಂಗದತ್ತವಾಗಿ ಬಂದಿರುವುದರಲ್ಲಿ ನಮಗೆ ಹಕ್ಕಿಲ್ಲ. ಒಂದು ವೇಳೆ ಇಲ್ಲೇನಾದರೂ ನಾವು ಮಸೂದೆ ಪಾಸ ಮಾಡಿದ್ದೇ ಆದರೆ ಇಡೀ ಸದನದಲ್ಲಿರುವ 225 ಜನ ಶಾಸಕರ ಮೇಲೆ ಸರಛಾರ್ಜ ನಾವು ಕೊಡಬೇಕಾಗಿ ಬರುತ್ತದೆ. ನಮ್ಮ ಮನೆ ಮಠ ಮಾರಿದರೂ ಕೂಡ 118 ಕೋಟಿ ನಮ್ಮ ಕೈಯಲ್ಲಿ ಕೊಡುವುದಕ್ಕಾಗುವುದಿಲ್ಲ. ರಾಜ್ಯಾಂಗದಲ್ಲಿ ನಮಗೆ ಯಾವುದಕ್ಕೆ ಹಕ್ಕಿಲ್ಲವೋ, ಅದನ್ನು ಇಲ್ಲಿಗೆ ತೆಗೆದುಕೊಂಡು ಬಂದು ನೀವು ಅಪ್ರೂವ್ ಮಾಡಿ ಎಂದು ಹೇಳಿದರೆ ನಾವು ಒಪ್ಪಿಗೆ ಕೊಡುವುದಕ್ಕೂ ಕೂಡ ಸಾಧ್ಯವಿಲ್ಲ. ಅದಕ್ಕೆ ನಾವು ಭಾಗಿಗಳಾಗುವುದಿಲ್ಲ. ನಾವ್ಯಾರೂ ಕೂಡ ಇದಕ್ಕೆ ಭಾಗಿಗಳಾಗಿ ನಮ್ಮನ್ನು ಜವಾಬ್ದಾರರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸನ್ಮಾನ್ಯ ಮಂತ್ರಿಗಳು ತಕ್ಷಣ ಇದಕ್ಕೆ ಕಾನೂನನ್ನು ಯಾರಿಂದಲಾದರೂ ಒಪ್ಪಿಗೆ ತೆಗೆದುಕೊಂಡು ಮುಂದೆ ತರುವುದಕ್ಕೆ ಪ್ರಯತ್ನ ಪಡಿ. ನಿಮಗೆ ಖಂಡಿತವಾಗಿ ಪ್ರಾವಿಷನ್‌ನಲ್ಲಿ ಅವಕಾಶ ಇಲ್ಲ. ರಾಜ್ಯಾಂಗದಲ್ಲೂ ಅವಕಾಶ ಇಲ್ಲ. ರಾಜ್ಯಾಂಗಕ್ಕೆ ವಿರುದ್ಧವಾಗಿ Against the Constitution, you cannot pass law. ನಾನಾಗಲಿ, ಅಧ್ಯಕ್ಷರಾಗಲಿ, ತಾವಾಗಲಿ, We are bound by the Constitution. ನಾವು ಇಲ್ಲಿ ಓತ್ ತೆಗೆದುಕೊಂಡು ಬಂದಿದ್ದೇವೆ ರಾಜ್ಯಾಂಗಕ್ಕೆ ಬದ್ಧರಾಗಿರುತ್ತೇವೆ ಎಂದು. ಆದುದರಿಂದ ನೀವು ರಾಜ್ಯಾಂಗಕ್ಕೆ ವಿರುದ್ಧವಾಗಿ ನೀವು ಈ ರೀತಿ ಈ ವಿಧಿಯನ್ನು ತೆಗೆದುಕೊಂಡು ಬಂದು ನೀವು ಪಾಸ್ ಮಾಡಿ ಮಸೂದೆ ಪಾಸ್‌ಮಾಡಿ ತಂದು ಇಲ್ಲಿ ಸಭೆಯಲ್ಲಿರುವ ಎಲ್ಲಾ ಸದಸ್ಯರ ಮೇಲೆ ಹೊಣೆಯನ್ನು ತಂದು ಸಾಲಗಾರರನ್ನಾಗಿ ಮಾಡಿ ನಾವೆಲ್ಲರೂ ಮನೆಗೆ ಹೋಗುವ ಪರಿಸ್ಥಿತಿಯನ್ನು ದಯವಿಟ್ಟು ತರಬೇಡಿ. ನಾವು ಇದಕ್ಕೆ ಸಿದ್ಧರಾಗಿಲ್ಲ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಿ. ಮೊಟ್ಟಮೊದಲನೆಯದಾಗಿ ಇದಕ್ಕೆ ಅಡ್ವೈಸ್ ತೆಗೆದುಕೊಂಡು ಮುಂದೆ ತರುವುದಕ್ಕೆ ಕಾನೂನಿನಲ್ಲಿ ಅವಕಾಶ ಇದ್ದರೆ ತರುವುದಕ್ಕೆ ಪ್ರಯತ್ನಪಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಕರುಣಾನಿಧಿಯವರ ಸರ್ಕಾರವನ್ನು ಇದೇ ಕಾರಣಕ್ಕಾಗಿ ಕೇಂದ್ರ ಸರ್ಕಾರ ವಜಾ ಮಾಡಿತ್ತು. ಅದು ಯಾವಾಗ ಎಂದು ತಮಗೆ ಗೊತ್ತಿರಬಹುದು. ಕೇಂದ್ರ ಸರ್ಕಾರದ ಹಣವನ್ನು ಅವರ ಪ್ಯಾಟ್ರನ್ ಪ್ರಕಾರ ಖರ್ಚು ಮಾಡದೆಯೇ ಬೇರೆಯದಕ್ಕೆ ಖರ್ಚು ಮಾಡಿದರು ಎನ್ನತಕ್ಕ ಮುಖ್ಯವಾದ ಕಾರಣದಿಂದ ಕೇಂದ್ರ ಸರ್ಕಾರದವರು ಕರುಣಾನಿಧಿಯವರ ಸರ್ಕಾರವನ್ನು ವಜಾ ಮಾಡಿದ್ದರು. ಬೇಕಾದರೆ ನೋಡಿ. if my memory is correct, I am telling this. ಆದ್ದರಿಂದ ತಾವು ಇದನ್ನು ಅಷ್ಟು ಲಘುವಾಗಿ ಭಾವಿಸಬೇಡಿ.

+ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಸಂವಿಧಾನದ ವಯಲೇಷನ್ ಆಗುತ್ತದೆ. ಎಸ್. ಸಿ.ಪಿ.ಟಿ.ಎಸ್.ಪಿ ಕಾರ್ಯಕ್ರಮಕ್ಕೆ ಅದರದ್ದೇ ಆದಂಥ ನಾರ್ಮ್ಸ್ ಇದೆ. ಆ ಚೌಕಟ್ಟನ್ನು ಧಾಟಿ ಹೋದರೆ ಮುಂದೆ ತೊಂದರೆಯಾಗುತ್ತದೆ. ಬೇರೆ ರಾಜ್ಯಗಳಲ್ಲಿ ಈ ರೀತಿ ತೀರ್ಮಾನ ತೆಗೆದುಕೊಂಡಿರುವ ಮೂರೇ ಮೂರು ಮುಖ್ಯ ಕಾರ್ಯಕ್ರಮವೆಂದು ಇತ್ತು. ತಾವು

ತೆಗೆದುಕೊಂಡಿರುವ ಮೂರೇ ಮೂರು ಮುಖ್ಯ ಕಾರ್ಯಕ್ರಮಗಳಲ್ಲಿ ಭೂ ಒಡೆತನದ ಕಾರ್ಯಕ್ರಮವನ್ನು ಎಲ್ಲಿಡುತ್ತೀರಿ? ನಾವು ಎಸ್.ಸಿ./ಎಸ್.ಟಿ. ಸಮಿತಿಯಲ್ಲಿ ಸದಸ್ಯರಾಗಿದ್ದು ಆರೋಗ್ಯ ಇಲಾಖೆಯಲ್ಲಿ ಹತ್ತಾರು ವರ್ಷಗಳಿಂದ ಹಣವೇನು ವಿನಿಯೋಗವಾಗಿಲ್ಲವೋ ಅದರ ಬಗ್ಗೆ ಆರೋಗ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಸ್ಪಷ್ಟವಾದ ತಿಳುವಳಿಕೆಯನ್ನು ಕೊಟ್ಟಿದ್ದೇವೆ. ಯಾರು ಆರ್ಥಿಕವಾಗಿ ಬಹಳ ಹಿಂದಿದ್ದಾರೆ ಅಂಥ ಎಸ್.ಸಿ/ಎಸ್.ಟಿ. ಜನಾಂಗದವರೇನು ಕ್ಯಾನ್ಸರ್, ಹೃದಯ ಖಾಯಿಲೆ, ಕಿಡ್ನಿ ತೊಂದರೆಗಳಂಥ ದೊಡ್ಡ ಖಾಯಿಲೆಗೆ ತುತ್ತಾದಾಗ ಅವರಿಗೆ ಹಣವನ್ನು ಭರಿಸಿ ಉಪಚಾರ ಪಡೆಯುವ ಶಕ್ತಿ ಇರುವುದಿಲ್ಲ. ಆದ್ದರಿಂದ ಆರೋಗ್ಯ ಇಲಾಖೆಯು ಎಸ್.ಸಿ.ಪಿ.ಟಿ. ಎಸ್.ಪಿ. ಹಣದಲ್ಲಿ ಭರಿಸಿ ಅವರ ಆರೋಗ್ಯ ಸುಧಾರಣೆಗೆ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಸಲಹೆಯನ್ನು ಕೊಟ್ಟಿದ್ದೇವೆ. ಆದರೆ ತಾವು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಒಂದೇ ಒಂದು ಮಾತನ್ನು ಹೇಳುತ್ತಿಲ್ಲ. ಭೂ ಒಡೆತನದ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಿಲ್ಲ. ಎಸ್.ಸಿ/ಎಸ್.ಟಿ. ಸಮಿತಿಯವರು ಮಾದರಿ ಗ್ರಾಮವನ್ನಾಗಿ ತೆಗೆದುಕೊಳ್ಳಬೇಕೆಂದು ಸಲಹೆಯನ್ನು ಕೊಟ್ಟಿದ್ದೇವೆ. ಅದರ ಬಗ್ಗೆ ತಾವು ಮಾತನಾಡುತ್ತಿಲ್ಲ. ಕೇವಲ ಎರಡುಮೂರು ಕಾರ್ಯಕ್ರಮವನ್ನಿಟ್ಟುಕೊಂಡು ಇಡೀ ಎಸ್.ಸಿ/ಪಿ.ಟಿ. ಎಸ್.ಪಿ. ಹಣವನ್ನು ಇದರಲ್ಲಿ ವಿನಿಯೋಗ ಮಾಡುತ್ತೇವೆಂದರೆ ಬಹಳ ದೊಡ್ಡ ಅನಾಹುತ ಮಾಡಿದಂತಾಗುತ್ತದೆ. ಯಾವ ಕಾರ್ಯಕ್ರಮಗಳ ಅಡಿಯಲ್ಲಿ ಈ ಯೋಜನೆಯನ್ನು ರೂಪಿಸಬೇಕು ಎನ್ನುವುದಕ್ಕೆ ಅವಕಾಶ ಮಾಡಿಕೊಡಬೇಕು, ಅದರ ಬಗ್ಗೆ ಇಲ್ಲಿ ದೀರ್ಘವಾಗಿ ಚರ್ಚೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಸರ್ಕಾರ ಇನ್ನೊಮ್ಮೆ ಪರ್ಯಾಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

+ ಶ್ರೀ ಹೆಚ್.ಡಿ. ಬಸವರಾಜ್ (ಸೋಮವಾರಪೇಟೆ) : ಮಾನ್ಯ ಉಪಾಧ್ಯಕ್ಷರೇ, ಈ ಜನಾಂಗದವರ ಸಲುವಾಗಿ ಇದ್ದ ಸುಮಾರು 24 ಕಾರ್ಯಕ್ರಮಗಳನ್ನು ಈ ಸರ್ಕಾರ ತೆಗೆದುಹಾಕಿ ಕೇವಲ ಮೂರೇ ಮೂರು ಕಾರ್ಯಕ್ರಮಗಳನ್ನು ಮಾಡಬೇಕೆಂದು ಹೊರಟಿದೆ. ಈ ರೀತಿ ಮಾಡಿದರೆ ಸಂವಿಧಾನದ ತೊಂದರೆ ಬರುತ್ತದೆ, ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ತಮಗೇ ಬಿಟ್ಟಿದ್ದೇನೆ. ಈ ಜನಾಗಂದವರ ಕಲ್ಯಾಣಕ್ಕಾಗಿ ಸುಮಾರು 24 ಕಾರ್ಯಕ್ರಮಗಳನ್ನು ಹಿಂದೆ ಇದ್ದ ಸರ್ಕಾರದವರು ಈಗ ಇದ್ದ ಸರ್ಕಾರದವರು ಕುಳಿತುಕೊಂಡು ನಿರ್ಧಾರ ಮಾಡಿದ್ದೀರಿ. ಅದರ ಏಕಾಏಕಿ ಈ ನಿರ್ಧಾರವನ್ನು ಬದಲಾವಣೆ ಮಾಡಿದ್ದೀರಿ, ಇದಕ್ಕೆ ಕಾರಣವೇನು ಎಂಬುದು ನಮಗೆ ಗೊತ್ತಾಗಲಿಲ್ಲ. ಈ 24 ಯೋಜನೆಗಳನ್ನು ಆ ವರ್ಗದ ಜನರ ಕಲ್ಯಾಣಕ್ಕೆ ಅಳವಡಿಸುವಲ್ಲಿ ಯಾವ ರೀತಿಯಲ್ಲಿ ವಿಫಲರಾಗಿದ್ದೀರೆಂದು ನಮಗೆ ಗೊತ್ತಾಗಲಿಲ್ಲ. ಈ ಮೂರು ಕಾರ್ಯಕ್ರಮಕ್ಕೆ ಒಟ್ಟಾರೆ 118.68 ಕೋಟಿ ಹಣವನ್ನು ಇಟ್ಟಿದ್ದೀರಲ್ಲಾ ಅದರಲ್ಲೇನಾದರೂ ನಿರ್ದಿಷ್ಟತೆಯನ್ನು ತೋರಿಸಿದ್ದೀರೋ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಕಲ್ಯಾಣಕ್ಕಾಗಿ 84.82 ಕೋಟಿ ರೂ.ಗಳ ಹಣವನ್ನು ವೆಚ್ಚಮಾಡುತ್ತೇವೆ ಎಂದು ಹೇಳಿದ್ದೀರಿ. 24 ಕಾರ್ಯಕ್ರಮಗಳನ್ನು ಏಟಂವೈಸ್ ಮಾಡಿದಂಥ ಕಲ್ಯಾಣ ಕಾರ್ಯಕ್ರಮವನ್ನೇ ತಾವು ಅನುಷ್ಠಾನಗೊಳಿಸಲಿಲ್ಲ ಇನ್ನು ಈ 84.82 ಕೋಟಿ ಹಣವನ್ನು ಹೇಗೆ ಖರ್ಚು ಮಾಡುತ್ತೀರಿ? ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಜನರಿಗೆ ಮನೆಗಳನ್ನು ಕಟ್ಟಲು ಹಣವನ್ನು ಕೊಟ್ಟಿತ್ತು, ಆ ರೀತಿ ಹಣವನ್ನು

ಕೊಟ್ಟಿದ್ದರೂ ಮತ್ತೆ ಮೂರು ಕೋಟಿ ಹಣವನ್ನು ಇದರಲ್ಲಿ ಬಿಡುಗಡೆ ಮಾಡಬೇಕೆಂದರೆ ಕಾರಣವೇನು? ಅಂದರೆ ಹಿಂದೆ ಕೊಟ್ಟಿದ್ದಂಥ ಹಣವೇನಾಯಿತು? ತಾವು ಕೊಳಚೆ ನಿರ್ಮೂಲನಾ ಮಂಡಳಿಗೆ 13.78 ಕೋಟಿ ಹಣವನ್ನು ಕೊಡುತ್ತಿದ್ದೀರಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ವರ್ಷದ ಕೊನೆಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂಥ ಸಾಧ್ಯತೆಗಳೇನಿತ್ತು? ಇಲ್ಲಿರುವವರಿಗೆ ಸಾಕಷ್ಟು ಕೊಳಚೆ ನಿರ್ಮೂಲನೆ ಮಾಡುವಂಥ ಕಾರ್ಯಕ್ರಮಗಳು ಇದ್ದದನ್ನು ಮಾಡದೆಯೇ ಈಗ ಹೊಸ ಕಾರ್ಯಕ್ರಮ ಹಮ್ಮಿಕೊಳ್ಳುವ ಅವಶ್ಯಕತೆ ಈಗ ಏನಿತ್ತು? ಇನ್ನು ಎರಡು ತಿಂಗಳುಗಳಲ್ಲಿ 118.68 ಕೋಟಿ ಮೊತ್ತದ ಅಗಾಧಪ್ರಮಾಣದ ಹಣವನ್ನು ವಿನಿಯೋಗಿಸಲು ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನು ಗಿರಿಜನರ ಉಪಯೋಜನೆಯ ಬಗ್ಗೆ ಹೇಳುವುದಾದರೆ, ಈ ರಾಜ್ಯದಲ್ಲಿ ಸುಮಾರು ಇಪ್ಪತ್ತು ಲಕ್ಷ ಗಿರಿಜನರು ಇದ್ದಾರೆ. ಈ ಜನರಿಗಾಗಿ ಮೀಸಲಾಗಿದ್ದ ಹಣವನ್ನು 1994-95, 95-96, 96-97ರಲ್ಲಿ ಸರಿಯಾಗಿ ವಿನಿಯೋಗ ಮಾಡಲಿಲ್ಲ. ಕೇಂದ್ರ ಪರಿಶಿಷ್ಟ ಜಾತಿ ಮತ್ತು ಪಂಗಡದ ಆಯೋಗದ ಅಧ್ಯಕ್ಷರಾದ ಶ್ರೀ ಹೆಚ್. ಹನುಮಂತಪ್ಪನವರು ಈ ರಾಜ್ಯಕ್ಕೆ ಭೇಟಿ ನೀಡಿದ್ದಂಥ ಸಂದರ್ಭದಲ್ಲಿ ಕಳೆದ ಐದು ವರ್ಷಗಳಿಂದ ಈ ಜನಾಂಗದವರಿಗೆ ಮೀಸಲಾಗಿರುವ ಹಣವನ್ನು ಸರಿಯಾದ ರೀತಿಯಲ್ಲಿ ವಿನಿಯೋಗ ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಈ ಸರ್ಕಾರ ಸರಿಯಾಗಿ ಆ ಹಣವನ್ನು ವೆಚ್ಚ ಮಾಡುತ್ತಿಲ್ಲ. ಅಲ್ಲಿ ಮಾಡಿದ್ದ ತಪ್ಪನ್ನು ತಿದ್ದಿಕೊಳ್ಳದೆ ಮತ್ತೆ ಹೊಸ ಕಾರ್ಯಕ್ರಮವನ್ನು ಹಮ್ಮಿಕೊಂಡು 118.62 ಕೋಟಿ ಮೀಸಲಾಗಿಟ್ಟಿದ್ದ ಹಣವನ್ನು ಇದಕ್ಕೆ ವರ್ಗ ಮಾಡಿ ಆ ಜನಾಂಗದವರ ಕಲ್ಯಾಣ ಮಾಡುತ್ತೇವೆಂದರೆ ನಿಜವಾಗಿಯೂ ತಾವು ಪ್ರಯೋಜನವನ್ನು ಪಡೆಯುತ್ತೀರೋ? ಆ ಜನರ ಹಿತವನ್ನು ಕಾಪಾಡುತ್ತೀರೋ ಆ ವಿಚಾರದ ಬಗ್ಗೆ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

+ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಉಪಾಧ್ಯಕ್ಷರೆ, the SCP amount is used for the Scheduled Castes and Scheduled Tribes ಯಾವುದೇ ಸರ್ಕಾರ ಹೊಸದಾಗಿ ಬಂದಾಗ ಪರಿಶಿಷ್ಟ ಜಾತಿಯವರಿಗೆ ಎಲ್ಲಾ ಅನುಕೂಲವನ್ನು ಮಾಡಿ ಕೊಡುತ್ತೇವೆಂದು ಹೇಳುತ್ತಾರೆ. ಆ ಜನಾಂಗದವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ, ನೀರಿನ ಸೌಲಭ್ಯವನ್ನು ಒದಗಿಸುತ್ತೇವೆಂದು ಹೇಳುತ್ತಾರೆ. ಆದರೆ ಸಮಾಜ ಕಲ್ಯಾಣ ಇಲಾಖೆಯ ಸಚಿವರು ನಮ್ಮ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ಹಾಗಿದ್ದ ಮೇಲೆ ಆ ಖಾತೆ ಏಕೆ ಬೇಕು? When he says that he does not have money, what is he necessity that he should have that portfolio? The Social Welfare Minister should be confident. He should give an assurance to the Scheduled Caste people. ಸುಮ್ಮನೆ ಹಣವನ್ನು ಅಲ್ಲಿಗೆ ಡೈವರ್ಟ್ ಮಾಡುತ್ತೇವೆ, ಇಲ್ಲಿಗೆ ಡೈವರ್ಟ್ ಮಾಡುತ್ತೇವೆಂದರೆ ಸರಿಯಾಗುವುದಿಲ್ಲ. Where is that necessity? to divert that amount from one place to another place? ಪರಿಶಿಷ್ಟ ಜಾತಿಯವರ ಏರಿಯಾಕ್ಕೆ ಹಾಕಬೇಕಾಗಿರುವ ಬೋರ್‌ವೆಲ್‌ಗಳನ್ನೆಲ್ಲಾ ಬೇರೆ ಕಡೆಗೆ ಹಾಕುತ್ತಿದ್ದೀರಿ. Who is going to question them? It is the Social Welfare Minister. The Social Welfare Minister

says `I am for Scheduled Caste people. ಸಮಾಜದ ಕಲ್ಯಾಣ ಸಚಿವರನ್ನು ಎಷ್ಟು ಮನೆಗಳನ್ನು ಈ ಜನಾಂಗದವರಿಗೆ ಕಟ್ಟಿದ್ದೀರೆಂದು ಕೇಳಿದರೆ, ಹಣವೆಲ್ಲಿದೆ, ನಾನು ಹಣವನ್ನು ತೆಗೆದುಕೊಂಡು ಬಂದು ಕೊಡಲು ಆಗುತ್ತದೆಯೇ ಎಂದು ಹೇಳುತ್ತಾರೆ. ಮಂತ್ರಿಗಳಾಗಿ ಅವರು ಹಣವಿಲ್ಲವೆಂದು ಹೇಳುತ್ತಾರೆ. ನನಗೆ ಖಾತೆಯನ್ನು ಕೊಡಿ, ಹಣ ಎಲ್ಲಿದೆಯೆಂದು ನಾನು ತೋರಿಸುತ್ತೇನೆ. ನಾವು ಮಂತ್ರಿಗಳ ಹತ್ತಿರ ಹೋಗಿ ನಮಗೆ ಸಾವಿರ ಮನೆಗಳನ್ನು ಕಟ್ಟಿಕೊಡಿ ಎಂದರೆ ಹಣವಿಲ್ಲವೆಂದು ಹೇಳುತ್ತಾರೆ. You should specifically says Rs. 1,500 crore or Rs. 2,000 crore will be given to the Social Welfare Department. Let the Social Welfare Department take care of the Scheduled Castes and Scheduled Tribes. ಅದನ್ನು ಬಿಟ್ಟು ಆ ಹಣವನ್ನು ಡೈವರ್ಟ್ ಮಾಡುತ್ತೇವೆಂದು ಹೇಳುತ್ತೀರಲ್ಲಾ, ಮಾತನಾಡುವುದು ದೇವರ ತರಹ ಆದರೆ ಒಡೆಯುವುದು ಪೆರುಮಾಳ ಗುಡಿಯನ್ನೇ, ಮಾತನಾಡುವಾಗ ಸರ್ಕಾರ ಪರಿಶಿಷ್ಟ ಜಾತಿಯವರ ಪರವಾಗಿದೆ, ನಾವು ಪರಿಶಿಷ್ಟ ಜಾತಿಯವರ ಪರವಾಗಿದ್ದೇವೆಂದು ಹೇಳುತ್ತಾರೆ, ಆದರೆ ಅದರ ಕಲ್ಯಾಣಕ್ಕಾಗಿ ಒಂದು ಕೆಲಸವನ್ನು ಮಾಡುವುದಿಲ್ಲ. ಹೆಸರು ನಮ್ಮದು ತಿನ್ನುವುದು ಬೇರೆಯವರು. Therefore, the amount should not be diverted. If you are doing the diversion of the amount, the government is doing ijjustice for the entire 90 lakh Scheduled Caste and Scheduled Tribe people. Kindly instruct the Government that not even a single pie should be diverted. The SCP fund has been granted be the Central Government also. You are using all the fund in the name of the Scheduled Castes. ಪರಿಶಿಷ್ಟ ಜಾತಿಯವರನ್ನು ಮುಟ್ಟಿದರೆ ಅವರು ಅನ್‌ಟಚಬಲ್ ಆದರೆ ಅವರಿಗೆ ಮೀಸಲಾಗಿರುವ ಹಣವನ್ನು ತೆಗೆದುಕೊಳ್ಳಲು ಏನೂ ಇಲ್ಲವೇ? Therefore, kindly just take interest or be cautions not to do injustice to the Scheduled Caste people. The SCP amount should not be diverted and instead give more amount to the Social Welfare Department. ಬನ್ನಿ ನಾವು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎಂದು ಮಂತ್ರಿಗಳು ಹೇಳಬೇಕು. ಆದರೆ ಇವರಿಗೆ ಮೀಸಲಾಗಿರುವ ಹಣವನ್ನು ಡೈವರ್ಟ್ ಮಾಡಲು ಮಾತ್ರ ಅವಕಾಶ ಮಾಡಿಕೊಡಬಾರದು. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಪೂರಕ ಅಂದಾಜಿನ ಎರಡನೆ ಕಂತಿನ ಒಪ್ಪಿಗೆಗಾಗಿ ಈಗಾಗಲೇ ಸಭೆಯ ಮುಂದೆ ತಂದಿದ್ದಾರೆ. ಇಲ್ಲಿರುವ ಕ್ಯಾಪಫ್ಲೋ 69 ಕೋಟಿ ಏನಿದೆ ಅದಕ್ಕೆ ನಿಮ್ಮದೇ ಆದಂಥ ಸಂಪನ್ಮೂಲವು ರೂಢಿಸಿಕೊಳ್ಳಲು ತಮಗೆ ಶಕ್ತಿಯಿಲ್ಲ. ಬೇರೆ ಬಾಬ್ತುಗಳಿಗಾಗಿ ಈ ಸದನ ಈಗಾಗಲೇ ಹಣವನ್ನು ಖರ್ಚು ಮಾಡಲು ಒಪ್ಪಿಗೆ ಕೊಟ್ಟಿದ್ದು, ಆ ರೀತಿ ಒಪ್ಪಿಗೆ ಕೊಟ್ಟಿರುವ ಹಣವನ್ನು ಖರ್ಚು ಮಾಡದೆಯೇ, ಆವತ್ತು ತಾವು ಈ ಸಭೆಯ ಮುಂದೆ ತರುವಂಥ ಸಂದರ್ಭದಲ್ಲಿ ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ನಿಗದಿ ಮಾಡಿದೆಯೆಂದು

ದೊಡ್ಡದಾಗಿ ಭಾಷಣವನ್ನು ಸಹ ಮಾಡಿದ್ದಿರಿ. ವಿವಿಧ ಇಲಾಖೆಗೆ ಇಂತಿಷ್ಟು ಹಣವನ್ನು ಖರ್ಚು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಆದರೆ ಆದರಲ್ಲಿನ ಹಣವನ್ನು ಖರ್ಚು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ. ಆದರೆ ಆದರಲ್ಲಿನ ಹಣವನ್ನು ಖರ್ಚು ಮಾಡದೆಯೇ, ಆದರ ಹಣವನ್ನು ಕಡಿತಗೊಳಿಸಿ ಆದನ್ನು ಡೈವರ್ಟ್ ಮಾಡಿ ಕೊಡತಕ್ಕ ಪ್ರಯತ್ನದಿಂದ ನಿಮಗೆ ಸಂಪನ್ಮೂಲವನ್ನು ರೂಢಿಸಿಕೊಳ್ಳಲು ಶಕ್ತಿ ಇಲ್ಲವೆಂಬುದು ಅರ್ಥವಾಗುತ್ತದೆ. ಪ್ಲಾನ್ ಔಟ್‌ಲೇಯಲ್ಲಿ ಸುಮಾರು 500 ಕೋಟಿ ರೂಪಾಯಿಗಳ ಕೊರತೆಯಾಗಿರುವುದರಿಂದ ನಿಮಗೆ ಹಣಕಾಸಿನ ಕೊರತೆ ತುಂಬಾ ಆಗಿದೆಯೆಂದು ತೋರಿಸುತ್ತದೆ. ಮುಂದೆ ತಾವು ಬಜೆಟ್‌ನ್ನು ಮಂಡಿಸುವಾಗ ಎಷ್ಟು ಕೊರತೆ ಬಜೆಟನ್ನು ಮಂಡಿಸುತ್ತೀರಿ ಎಂಬುದನ್ನು ನಾವು ಮುಂದಾಗಿಯೇ ಅರ್ಥ ಮಾಡಿಕೊಳ್ಳಬಹುದಾಗಿದೆ. ಈ ಪರಿಪಾಠವನ್ನು ಬಿಡುವುದು ಒಳ್ಳೆಯದು. ತಾವು ಹೊಸ ಯೋಜನೆಗಳಿಗೆ ಹಣವನ್ನು ತೊಡಗಿಸಬೇಕಾದರೆ ನಿರ್ದಿಷ್ಟವಾದ ಸೌಪನ್ಮೂಲವನ್ನು ಇಟ್ಟುಕೊಂಡೇ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸದನದ ಮುಂದೆ ಒಂದು ಸಲ ತರುವುದು ಅನಂತರ ಅದರ ಹಣವನ್ನು ಡೈವರ್ಟ್ ಮಾಡುವುದು ಮುಂತಾಗಿ ಮಾಡಿದರೆ ತಾವು ವಿಧಾನ ಸಭೆಯನ್ನು ಲಘುವಾಗಿ ಪರಿಗಣಿಸಿದಂತಾಗುತ್ತದೆ. ಇದರ ಬಗ್ಗೆ ತಾವು ಎಚ್ಚರಿಕೆಯನ್ನು ವಹಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಹಿರಿಯರಾದ ರಾಮಕೃಷ್ಣರವರು, ಪ್ರಮೀಳಾರವರು, ಜಯಚಂದ್ರ ಹಾಗೂ ವಿಜಯಶಂಕರ ಇವರುಗಳ ವಿಚಾರವನ್ನು ಕೇಳಿದೆ, ಆದರೆ ರಾಜೇಂದ್ರನರವರ ವ್ಯಾಖ್ಯಾನವೇ ಬೇರೆಯಾಯಿತು. ಸ್ವಾಮಿ, ವಿಶೇಷ ಘಟಕ ಯೋಜನೆಯಲ್ಲಿ ಗಿರಿಜನ ಪರಿಶಿಷ್ಟ ಜಾತಿ ಪಂಗಡದವರಿಗಾಗಿ ಇಟ್ಟಿರುವ ಹಣ ಹಲವಾರು ಯೋಜನೆಗಳಿಗಾಗಿ. ಆ ಹಣವನ್ನು ಅವರಕಲ್ಯಾಣಕ್ಕೆ ಹೊರತು ಬೇರೆ ಯಾವುದೇ ಬಾಬ್ತಿಗೂ ಖರ್ಚು ಮಾಡಲು ಯಾರಿಗೂ ಅಧಿಕಾರ ಇಲ್ಲ. ಆದರೆ ಈ ಹಣವನ್ನು ಈ ಹಿಂದೆ ಈ ಸದನ ಒಪ್ಪಿಗೆಕೊಟ್ಟಿರುವ ಬಾಬ್ತುಗಳಿಂದ ತೆಗೆದು ಬೇರೆ ಬಾಬ್ತುಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ ಎಂಬುದೇ ಮೂಲಭೂತ ಪ್ರಶ್ನೆ. ತಾವು ದಯವಿಟ್ಟು ವಿವರಣೆಯಲ್ಲಿ ನೋಡಿ; ಪುಟ 31ರಲ್ಲಿ ಸಪ್ಲಿಮೆಂಟರಿ ಎಸ್ಟಿಮೇಟ್ಸಿನಲ್ಲಿ ಆ ಹಣವನ್ನು ಒದಗಿಸಿರುವುದು ಯಾವ್ಯಾವ ಬಾಬ್ತುಗಳಿಗೆ ಎಂದು ನೀವು ಸ್ವಲ್ಪಮಟ್ಟಿಗೆ ವಿಚಾರ ಮಾಡಿಬಿಟ್ಟಿರೆ, ಈ ಸದನದಲ್ಲಿ ಹಲವಾರು ಬಾರಿ ನಾವು ಚರ್ಚೆ ಮಾಡಿದ್ದೇವೆ. ಈ ವಿಶೇಷ ಘಟಕ ಯೋಜನೆಯಡಿಯಲ್ಲಿ ಬರುತ್ತಿರುವ ಕೇಂದ್ರಸರ್ಕಾರದ ಹಣವನ್ನು ನಾವು ಹಲವಾರು ಇಲಾಖೆಗಳಿಗೆ ಹಂಚಿ, ಅಲ್ಲಿ ಆ ಹಣ ಖರ್ಚು ಮಾಡುವಾಗ ಅಲ್ಲಿ ದುರುಪಯೋಗವಾಗಿರುವುದು, ಫಲಾನುಭಾವಿಗಳಿಗೆ ತಲುಪದೇ ಇರುವುದು, ತಲುಪಿದ್ದರೂ ಅದರಲ್ಲಿ ಶೇಕಡ 50ರಷ್ಟನ್ನು ದಳ್ಳಾಳಿಗಳು ತಿಂದುಹಾಕಿರುವುದನ್ನು ನೇರವಾಗಿ ಈ ಸದನದಲ್ಲಿ ಹಲವಾರು ವರ್ಷಗಳಿಂದ ಚರ್ಚೆ ಮಾಡುತ್ತಾ ಬಂದಿದ್ದೇವೆ. ಮರೆಯಬೇಡಿ. ಇದನ್ನು ಗಮನಿಸಿಕೊಂಡ ರಾಜ್ಯ ಸರ್ಕಾರ ನೇರವಾಗಿ ಈ ಹಣವನ್ನು ಪರಿಶಿಷ್ಟ ಜಾತಿ ಪಂಗಡದವರಿಗೆ ತಲುಪಿಸಬೇಕೆಂಬ ಏಕಮೇವ ಉದ್ದೇಶದಿಂದ ಈ ವರ್ಷ ಈ ಕಾರ್ಯಕ್ರಮ ತೆಗೆದುಕೊಂಡಿವು. ಹಿಂದೆ ಕೃಷಿ ಇಲಾಖೆಗೆ 300 ಲಕ್ಷ ಕೊಡುತ್ತಿದ್ದೆವು, ಏಕೆ ಸ್ವಾಮಿ ಹಣ? ಎಲ್ಲಿ ಹೋಗುತ್ತಿತ್ತು ಅವರಿಗೆ ಬೀಜ ಹಂಚುವುದು ಗೊಬ್ಬರ ಹಂಚುವುದು ಸುಣ್ಣ ಹಂಚುವುದು ಕಡೆಗೆ ಯಾರಾರು ಅಧಿಕಾರಿಗಳಿದ್ದರೋ

ಎಲ್ಲಾ ತಿಂದುಕೊಂಡು ಹೋಗುತ್ತಿದ್ದರು, ಚಿಕ್ಕಾಸೂ ಕೂಡ ಅವರಿಗೆ ತಲುಪುತ್ತಿರಲಿಲ್ಲ. ಇದನ್ನು ನಾನೂ ಕೂಡ ನನ್ನ ಜಿಲ್ಲೆಯಲ್ಲಿ ಎತ್ತಿದ್ದೇನೆ, ಹಲವಾರು ಸದಸ್ಯರು ಇದೇ ಸದನದಲ್ಲಿ ಎತ್ತಿದ್ದೀರಿ. ಅದರ ಜೊತೆಯಲ್ಲಿ ಭೂಸಾರಸಂರಕ್ಷಣೆ. ಶ್ರೀ ಬೈರೇಗೌಡರು ಭೂಸಾರಸಂರಕ್ಷಣೆ ಎಂಬುದನ್ನು ಕಿತ್ತು ಹಾಕಬೇಕು ಎಂದರು. ಸಸಿಹೊಂಡ ನಿರ್ಮಾಣ ಮಾಡುವಂಥದ್ದು. ಪರಿಶಿಷ್ಟಜಾತಿ ಪಂಗಡದವರಿಗೆ ಕೊಟ್ಟಿರುವ ಹಣವೂ ಲೂಟಿ, ಬಾಕಿ ವರ್ಗಗಳಿಗಾಗಿ ಕೊಟ್ಟ ಹಣವೂ ಲೂಟಿಯಾಗಿ ಇದಕ್ಕೆ ಎಲ್ಲೋ ಒಂದು ಕಡೆ ಕಡಿವಾಣ ಹಾಕಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿತು. ಪಶುಸಂಗೋಪನೆ ಇಲಾಖೆ, ಏಕೆ ಸ್ವಾಮಿ? ಮೀನುಗಾರಿಕೆ ಇಲಾಖೆಗೆ ಹಣ ಕೊಡುತ್ತಿದ್ದರು, ಅಲ್ಲಿ ಯಾರೋ 10 ಫಲಾನುಭವಿಗಳನ್ನು ಹುಡುಕುವುದು ಅವರಿಗೆ ಮೀನುಗಳನ್ನು ಕೊಟ್ಟಿದ್ದೇವೆ ಎಂದು ಲೆಕ್ಕಹಾಕುತ್ತಿದ್ದುದು ರಾಮಕೃಷ್ಣರೇ ನಿಜವಲ್ಲವೆ? ಹತ್ತಾರು ವರ್ಷಗಳಿಂದ ನಾವು ಮಾಡುತ್ತಿರುವ ಕಾರ್ಯಕ್ರಮ ಇದು ಇದನ್ನು ನಾವು ಏನು ಮಾಡಿದೆವು ಅಂದರೆ ಆ ಇಲಾಖೆಗಳಿಗೆ ಹಿಂದಕ್ಕೆ ತೆಗೆದು ನೇರವಾಗಿ ಉಪಯುಕ್ತವಾದ ಬಾಬುಗಳಿಗೆ ಖರ್ಚು ಮಾಡಬೇಕೆಂದು 118 ಕೋಟಿ ರೂಗಳನ್ನು ಯಾವ್ಯಾವ ಬಾಬುಗಳಿಗೆ ಹಂಚಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ. ಪರಿಶಿಷ್ಟಜಾತಿ ಪಂಗಡದವರಿಗೆ ಅಭಿವೃದ್ಧಿ ತರುವ ಬಾಬುಗಳಿಗೆ ಆ ಹಣ ಒದಗಿಸುತ್ತೇವೆ. ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ನಾವು ತೆಗೆದುಕೊಂಡಿರುವ ತೀರ್ಮಾನವಿದು. ನಮ್ಮ ಅನುಭವದ ಹಿನ್ನೆಲೆಯಲ್ಲಿ ಈಗಿರುವ ಬಾಬುಗಳಿಗೆ ಹಣ ಖರ್ಚು ಮಾಡಿದರೆ ಆ 118 ಕೋಟಿಯಲ್ಲಿ ಶೇಕಡ 60ರಷ್ಟು ಹಣ ಹೋಗಿ ತಲುಪಲಿಲ್ಲ ಎಂದು ನಾವು ಒಪ್ಪಬೇಕಲ್ಲಾ ರಾಮಕೃಷ್ಣರೇ? ಇದಕ್ಕೋಸ್ಕರ ನಾವು ಹೊಸದಾದ ವ್ಯವಸ್ಥೆ ಮಾಡಿದೆವು. ಇಲಾಖೆಗಳಿಂದ ಇದನ್ನು ತೆಗೆದುಕೊಂಡು ಸಿಂಗಲ್ ವಿಂಡೋ ಏಜೆನ್ಸಿ ಎಂದು ಮಾಡಿ ಯಾವ್ಯಾವ ಬಾಬುಗಳಿಂಬುದನ್ನು ನಾವು ನಿಗದಿ ಮಾಡಿಕೊಂಡು ಅದಕ್ಕೆ ಹಣ ಖರ್ಚು ಮಾಡಬೇಕೆಂದು 35 ಸಾವಿರ ಅಂಬೇಡ್ಕರ್ ಮನೆಗಳನ್ನು ನಿರ್ಮಾಣ ಮಾಡಿದೆವು. 35 ಸಾವಿರ ಕುಟುಬಂದವರಿಗೆ ಈ ಹಣವನ್ನು ನೇರವಾಗಿ ಕೊಡುವ ಅವಕಾಶ ಆಯಿತು. ಇದರಲ್ಲಿ ಯಾವುದೇ ದುರುಪಯೋಗ ಆಗುವ ಸಂಭವ ಇಲ್ಲ ಆದರೂ ಕೆಲವು ಸಂದರ್ಭಗಳಲ್ಲಿ ಮಧ್ಯವರ್ತಿಗಳು ಇದ್ದಾರೆಂದು ನಮಗೂ ನಿಮಗೂ ಗೊತ್ತಿದೆಯಲ್ಲಾ ಆದರೂ ಸ್ವಲ್ಪಮಟ್ಟಿಗೆ ಈ ಹಣದ ದುರುಪಯೋಗ ಕಡಿಮೆ ಮಾಡಬೇಕು. ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯ ವಸತಿಯ ನಿರ್ಮಾಣಕ್ಕೆ ಸಹಾಯ ಮಾಡುವುದು. ಇನ್ನು ಮುಂದಕ್ಕೆ ಪಶುಸಂಗೋಪನೆ ಇಲಾಖೆ ಮೀನುಗಾರಿಕೆ ಇಲಾಖೆ ಕೃಷಿ ಇಲಾಖೆ ಅರಣ್ಯ ಇಲಾಖೆ ಎಂದು ಹೇಳಿ ಅಲ್ಲಿ ಜಿಲ್ಲಾ ಪಂಚಾಯಿತಿ ತಾಲ್ಲೂಕು ಪಂಚಾಯಿತಿಗಳ ಅಧಿಕಾರಿಗಳಿದ್ದಾರಲ್ಲಾ ಅವರೇ ಈ ಹಣವನ್ನು ಹತ್ತಾರು ವರ್ಷಗಳಿಂದ ಲೂಟಿಮಾಡಿಕೊಂಡು ಬಂದೆದ್ದು. ಇದನ್ನು ತಡೆಯುವುದಕ್ಕಾಗಿ ಈ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಪ್ರಥಮ ಬಾರಿಗೆ ಕರ್ನಾಟಕದಲ್ಲಿ. ಒಂದು ವರ್ಷ ನೋಡುತ್ತೇವೆ. ಇದರಿಂದ ಉಪಯೋಗ ಆಗಿದೆ ಎಂದು ಅನುಭವದಿಂದ ಕಂಡು ಬಂದರೆ ಆಗ ನಿಮ್ಮ ಸಲಹೆಗಳನ್ನೂ ಕ್ರೋಢೀಕರಿಸಿಕೊಂಡು ಮುಂದಿನ ವರ್ಷಕ್ಕೆ ಹೆಚ್ಚು ಹಣ ಸಂಗ್ರಹಿಸಿಕೊಂಡು ನೇರವಾಗಿ ಆ ಜನರಿಗೆ ತಲುಪಿಸುವ ಕಾರ್ಯಕ್ರಮ ರೂಪಿಸಬೇಕಾದದ್ದು ಯಾವುದೇ ನಾಗರಿಕ ಸರ್ಕಾರ ಮಾಡಬೇಕಾಗಿರುವಂತಹ ಕೆಲಸ ಆ ಕೆಲಸ ನಾವು ಇವತ್ತು ಮಾಡಿದ್ದೇವೆ. ಹಿಂದಿನ ಅನುಭವ, ಹಿಂದೆ ಈ ಸದನದಲ್ಲಿ ಆಗಿರುವ

ಚರ್ಚೆ ಆದ್ದರಿಂದ ಈ ಹಣವನ್ನು ಒಟ್ಟಾರೆ ಮಾಡಿ ಆ ಜನಗಳಿಗೆ ಸ್ವಲ್ಪವಾದರೂ ಆ ಪಾಪದ ಮಕ್ಕಳಿಗೆ ಕೊಡುತ್ತಿರುವುದರಲ್ಲಿ, ಅಂಗನವಾಡಿ ಶಿಕ್ಷಕರಿಗೆ ಕೊಡುತ್ತಿರುವುದರಲ್ಲೂ ಹಣ ತಿನ್ನುತ್ತಿದ್ದರು. ಇದನ್ನಾದರೂ ಸ್ವಲ್ಪಮಟ್ಟಿಗೆ ಕಡಿಮೆ ಮಾಡಬೇಕೆಂಬ ಏಕಮೇವ ದೃಷ್ಟಿಯಿಂದ ಹಣಕಾಸಿನ ಇಲಾಖೆ ಮತ್ತು ಸಮಾಜಕಲ್ಯಾಣ ಇಲಾಖೆಯವರು ತೀರ್ಮಾನ ತೆಗೆದುಕೊಂಡಿದ್ದೇವೆ. ನೋಡುವಾ ಈ ಸಲ ಒಂದು ಪ್ರಯೋಗ ಮಾಡಿ ಈ ಹಣವನ್ನು ನೇರವಾಗಿ ಹಂಚುವ ಎಂದು ಈ ಕೆಲಸ ಮಾಡಿದ್ದೇವೆ. ಇದರಲ್ಲಿ ಯಾವುದೇ ದುರುದ್ದೇಶವಿಲ್ಲ. ಉದ್ದೇಶ ಬಹಳ ಒಳ್ಳೆಯದು. ಈ ವರ್ಷ ಇದನ್ನು ನೋಡುವ, ಮುಂದಿನ ವರ್ಷದಲ್ಲಿ ಅನುಭವದ ಆಧಾರದ ಮೇಲೆ ಇದು ಸರಿಯಲ್ಲವೆಂದು ಕಂಡು ಬಂದರೆ ನಿಮ್ಮೆಲ್ಲರನ್ನೂ ಕರೆದು ಚರ್ಚೆ ಮಾಡುತ್ತೇವೆ. ಆ ಪಾಪದ ಜನರಿಗೆ ಕೊಡುತ್ತಿರುವ ಕೇಂದ್ರ ಸರ್ಕಾರದ ಹಣ ಮತ್ತು ರಾಜ್ಯಸರ್ಕಾರ ಹಣದಲ್ಲಿ ಚಿಕ್ಕಾಸೂ ದುರುಪಯೋಗವಾಗಬಾರದೆಂದು ನಮ್ಮನಿಮ್ಮೆಲ್ಲರ ಚಿಂತನೆ. ಆದಕ್ಕಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ನಿನ್ನೆ ಇದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ ಧನ ವಿನಿಯೋಗ ಮಸೂದೆಗೆ ತಮ್ಮ ಅಂಗೀಕಾರ ಕೊಡಿ. ಎಲ್ಲರ ಸಲಹೆಗಳನ್ನು ನಾವು ಮುಕ್ತರಾಗಿ ಸ್ವೀಕರಿಸಿ ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ ಅವುಗಳನ್ನು ಮನಸಿನಲ್ಲಿಟ್ಟುಕೊಂಡೇ ಮುಂದೆ ಹೆಜ್ಜೆ ಹಾಕುತ್ತೇವೆ.

+ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) : ಇದರ ಚರ್ಚೆಗೆ ನಾನು ವ್ಯಾಪಕವಾಗಿ ಉತ್ತರ ಕೊಡಬೇಕೆಂದು ಇದ್ದೆ. ರಾಮಕೃಷ್ಣರು ಪದೇಪದೇ ಇದರ ಬಗ್ಗೆ ಹೇಳುತ್ತಿರುತ್ತಾರೆ. ಡೈವರ್ಷನ್ ಎಂದು ಹೇಳಿದರೆ, ಇಲಾಖೆಯ ದುಡ್ಡು ಬೇರೆ ಜಾತಿ ವರ್ಗಗಳಿಗಾಗಿ ಖರ್ಚಾಗುತ್ತದೆ. ಗ್ರಾಮೀಣ ಪ್ರದೇಶ ಹರಿಜನ ಕೇರಿಗಳಿಗೆ ಮಾತ್ರ ನೀರು ಕೊಡಲು ಈ ಹಣ ಏತಕ್ಕಿರಬೇಕು. ಜಿಲ್ಲಾಪಂಚಾಯಿತಿ ಹರಿಜನ ಕೇರಿಗೆ ರಸ್ತೆ ಕೊಡತಕ್ಕಂಥಾದ್ದು, ಅದಕ್ಕೆ ಬೇರೆ ಇಲಾಖೆ ಇದೆ, ಜೆಡಪಿಯ ಜಿಲ್ಲಾಮಟ್ಟದ ಪ್ಲಾನ್‌ನಲ್ಲೇ ಅದು ಬರುತ್ತದೆ. ಡೈವರ್ಷನ್ ಅಂದರೆ, ಈ ಹಣವನ್ನು ಬೇರೆ ರೀತಿ ಉಪಯೋಗ ಮಾಡುವ ಹಾಗಿದ್ದರೆ ಮೊದಲನೇ ಪ್ರಾಧಾನ್ಯತೆ ಶಿಕ್ಷಣ, ಎರಡನೆಯದು ಗ್ರಾಮೀಣ ಪ್ರದೇಶಗಳಲ್ಲಿ ಜಮೀನು ಇರುವವರಿಗೆ ನೀರು ಕೊಡುವುದು ಗಂಗಾಕಲ್ಯಾಣ ಯೋಜನೆಯಡಿಯಲ್ಲಿ. ಮೂರನೆಯದು ಮನೆ ಕೊಡುವಂಥದ್ದು. 35 ಸಾವಿರ ಮನೆಗಳನ್ನು ಅಂಬೇಡ್ಕರ್ ಯೋಜನೆಯಡಿ ಕೊಡುತ್ತಿದ್ದೇವೆ ಈ ಸಲ. 10 ಸಾವಿರ ಬೋರ್‌ವೆಲ್ ಹಾಕಲು 101 ಕೋಟಿರೂಗಳನ್ನು ಡೈವರ್ಶನ್ ಮಾಡಿ ಅವರು ಆರ್ಥಿಕವಾಗಿ ತಮ್ಮ ಕಾಲ ಮೇಲೆ ನಿಲ್ಲಲು ಸಹಾಯ ಮಾಡುತ್ತಿದ್ದೇವೆ. ಈ ಹಣವನ್ನು ಬೇರೆ ವರ್ಗಕ್ಕೆ ಖರ್ಚು ಮಾಡುವುದಿಲ್ಲ, ಈ ವರ್ಗಕ್ಕೆ ಖರ್ಚು ಮಾಡುವುದು ಎಂಬುದನ್ನು ತಿಳಿದುಕೊಳ್ಳಬೇಕೆಂದು ಕೋರುತ್ತೇನೆ.

ಕರ್ನಾಟಕ ಧನ ವಿನಿಯೋಗ ವಿಧೇಯಕ, 1997

ಪರ್ಯಾಲೋಚನ ಪ್ರಸ್ತಾವ

ಅಧ್ಯಕ್ಷರು : "1997ರ ಕರ್ನಾಟಕ ಧನ ವಿನಿಯೋಗಕ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ : ವಿಧೇಯಕವನ್ನು ಮತ್ತಕ್ಕೆ ಹಾಕಬೇಕು.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ಈ ಸದನದ ಇತಿಹಾಸದಲ್ಲಿ ಧನ ವಿನಿಯೋಗ ವಿಧೇಯಕವನ್ನು ಸರ್ವಾನುಮತದಿಂದ ಪಾಸು ಮಾಡಿರುವ ಸತ್ಸಂಪ್ರದಾಯ ಇದೆ. ದಯವಿಟ್ಟು ಅದಕ್ಕೆ ಇಂದು ಭಂಗತರಬೇಡಿ. ನೀವು ಕೂಡ ಅಧಿಕಾರದಲ್ಲಿದ್ದವರು, ಹಳೆಯ ಸಂಪ್ರದಾಯವನ್ನು ನಿಲ್ಲಿಸಬಾರದು, ಆ ಸಂಪ್ರದಾಯವನ್ನು ಮುಟ್ಟಬೇಡಿ. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಇದನ್ನು ಮತಕ್ಕೆ ಹಾಕಬೇಕೆಂದು ಹೇಳುತ್ತಿರುವುದರಿಂದ, ನಾನು ಹೇಳುತ್ತೇನೆ, ತಾವು ದಯವಿಟ್ಟು ಆ ಕಾರ್ಯ ಮಾಡಬೇಡಿ. ಇದು ಸಂಸದೀಯ ಪದ್ಧತಿ, ಇದೊಂದು ಪರಂಪರೆ. ಮನಿ ಬಿಲ್ಸ್ ಅನ್ನು ಎಲ್ಲಾದರೂ ಮತಕ್ಕೆ ಹಾಕಿರುವುದನ್ನು ನೋಡಿದ್ದೀರೋ

ಶ್ರೀ ವೈ. ರಾಮಕೃಷ್ಣ : ನನ್ನದು ಕ್ರಿಯಾಲೋಪವಿದೆ. ಇದು ನಮ್ಮ ಪಕ್ಷದ ಹಕ್ಕು. I press for division, I want to take up this matter to the court.

ಶ್ರೀ ಎಂ. ಸಿ. ನಾಣಯ್ಯ : ನಾನು ಹೇಳುತ್ತೇನೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾವಾಗಲೂ ಮನಿ ಬಿಲ್ಸ್ ಅನ್ನು ಮತಕ್ಕೆ ಹಾಕಿದ್ದಿಲ್ಲ.

ಶ್ರೀ ವೈ. ರಾಮಕೃಷ್ಣ : ಅದನ್ನು ಮತಕ್ಕೆ ಹಾಕಬೇಕೆಂದು ಹೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಯಾವುದೇ ಮಸೂದೆಯನ್ನು ಮತಕ್ಕೆ ಹಾಕಬೇಕೆಂದು ಪ್ರೆಸ್ ಮಾಡಿ ಕೇಳಿದಂಥ ಸಂದರ್ಭದಲ್ಲಿ ಮತಕ್ಕೆ ಅವಕಾಶ ಮಾಡಿಕೊಡಲೇಬೇಕಾಗುತ್ತದೆ. ಅದರ ಬಗ್ಗೆ ಎರಡನೇ ಮಾತಿಲ್ಲ, ಇದರಲ್ಲಿ ಸದಸ್ಯರ ಹಕ್ಕಿದೆ. ಆದರೆ, ಇವೊತ್ತು ನಮಗೂ ಸಹ ಹತ್ತಾರು ವರ್ಷಗಳ ಅನುಭವವಿದ್ದು, ಅಪ್ರೊಪ್ರಿಯೇಷನ್ ಬಿಲ್ ಅಂಗೀಕಾರವಾಗುವ ಹಂತದಲ್ಲಿ ವಿರೋಧ ಪಕ್ಷದವರು ಬಹುಮತದಲ್ಲಿದ್ದಂಥ ಸಂದರ್ಭದಲ್ಲೂ ಸಹ ಸದರಿ ಬಿಲ್ಲನ್ನು ಮತಕ್ಕೆ ಹಾಕಬೇಕೆಂದು ಕೇಳಿಲ್ಲ, ಈ ಸತ್ಸಂಪ್ರದಾಯ ಕರ್ನಾಟಕದಲ್ಲಿದೆ. ಬಿಲ್ಲನ್ನು ಮತಕ್ಕೆ ಹಾಕಬೇಕೆಂದು ಕೇಳಲು ನಿಮಗೆ ಹಕ್ಕಿದೆ. ಅಲ್ಲದೆ, ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವಾಗಲೂ ನಿಮಗೆ ಕೇಳುವುದಕ್ಕೆ ಅವಕಾಶವಿದೆ. ನೀವು ಈ ಹಿಂದೆ ಸಂಸದೀಯ ಮಂತ್ರಿಗಳಾಗಿದ್ದಂಥವರು. You are a seniormost member. If you want to create a bad preceedent, you create it. But that is not correct.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾಳೆ ನಮ್ಮ ಮೇಲೆ 118 ಕೋಟಿ ರೂಪಾಯಿಗಳ ಹಣದ ಜವಾಬ್ದಾರಿ ಬೀಳಬಾರದು.

ಶ್ರೀ ಎಂ.ಸಿ. ನಾಣಯ್ಯ : ಈ ಸದನದ ಇತಿಹಾಸದಲ್ಲಿ ಈ ರೀತಿ ಆಗಿಲ್ಲ. ಹೊಸ ಸಂಪ್ರದಾಯವನ್ನು ಸೃಷ್ಟಿಸಬೇಡಿ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಧನ ವಿನಿಯೋಗ ವಿಧೇಯಕವನ್ನು ಮತಕ್ಕೆ ಹಾಕಬೇಕೆಂದು ಒತ್ತಾಯಿಸುತ್ತಿದ್ದರು)

ಉಪಾಧ್ಯಕ್ಷರು : ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ. ಸಿ. ನಾಣಯ್ಯ : ಮನಿ ಬಿಲ್ಲನ್ನು ಮತಕ್ಕೆ ಹಾಕಿರುವ ಸನ್ನಿವೇಶ ಎಲ್ಲಾದರೂ ಉಂಟೇ? ಎಲ್ಲಿಯೂ ಕೂಡ ನಡೆದಿಲ್ಲ.

ಶ್ರೀ ವೈ. ರಾಮಕೃಷ್ಣ : ನಾನು ನನ್ನ ಪಕ್ಷದ ನಿಲುವನ್ನು ಸ್ಪಷ್ಟಪಡಿಸಬೇಕಾಗಿದೆ. ಪಬ್ಲಿಕಗೇ ಆಗಲೀ, ಕೋರ್ಟಗೆ ಆಗಲೀ, ಸೆಂಟ್ರಲ್ ಗೌವರ್ನಮೆಂಟ್‌ಗೇ ಆಗಲೀ, ನಮ್ಮ ಪಕ್ಷದ ನಿಲುವು ಏನೆಂದು ತೋರಿಸಬೇಕಾದರೆ ಸದರಿ ಬಿಲ್ಲನ್ನು ಮತಕ್ಕೆ ಹಾಕುವ ಮುಖಾಂತರ ತೀರ್ಮಾನವಾಗಬೇಕು. I press for division ಎಂದು ನಾನು ಬೇಡಿಕೊಂಡಿದ್ದೇನೆ. ತಾವು ಅದಕ್ಕೆ ಅವಕಾಶ ಕಲ್ಪಿಸಿಕೊಡಿ, ಉದ್ದೇಶವಿಷ್ಟೆ, ನಾನು ಗೆದ್ದುಬಿಡುತ್ತೇನೆಂದಲ್ಲ.

ಶ್ರೀ ವಾಟಾಳ್ ನಾಗರಾಜ್ : ಉಪಾಧ್ಯಕ್ಷರೆ, ನಾವೂ ವಿರೋಧಿಸುತ್ತೇವೆ, ಆದರೆ, ಮತದಾನಕ್ಕೆ ನನ್ನ ಒತ್ತಾಯವಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಅಪ್ರೊಪ್ರಿಯೇಷನ್ ಬಿಲ್ಲನ್ನು ಮತಕ್ಕೆ ಹಾಕಬೇಕೆಂಬ ಬಗ್ಗೆ ಹಿರಿಯ ಸದಸ್ಯರಾದ ಶ್ರೀಮಾನ್ ವೈ. ರಾಮಕೃಷ್ಣರವರ ನಿಲುವು, ಒತ್ತಾಯವಿದೆ. ಅವರು ಏಕೆ ಆ ರೀತಿ ಹೇಳುತ್ತಿದ್ದಾರೆ ಎಂದರೆ ಸ್ಪೆಷಲ್ ಕಾಂಪೊನೆಂಟ್‌ನಲ್ಲಿ ಏನು ಅಲೊಕೇಷನ್ ಮಾಡಿದ್ದಾರೆ, ಅದು ಸರಿಯಿಲ್ಲವೆನ್ನುವ ವಾದವನ್ನು ನಿನ್ನೆ ಕೂಡ ನಾವು ಸಪ್ಲಿಮೆಂಟರಿ ಎಸ್ಟಿಮೇಟ್ ಮೇಲೆ ಚರ್ಚಿಸುತ್ತಿದ್ದಾಗ ಈ ವಿಷಯವನ್ನೂ ಪ್ರಸ್ತಾಪಿಸಿದ್ದೇವೆ. ಏಕೆಂದರೆ, ಪರಿಶಿಷ್ಟ ಜಾತಿ/ ವರ್ಗದವರ ಅಭಿವೃದ್ಧಿಗಾಗಿ ನಿಗದಿಪಡಿಸಿದ್ದಂಥ ಹಣ ಯಾವಾಗಲೂ ದುರುಪಯೋಗವಾಗುತ್ತದೆ ಇಲ್ಲವೇ ಖರ್ಚು ಮಾಡದೇ ಹಾಗೇ ಇಟ್ಟು ಬಿಡುತ್ತರಾದ್ದರಿಂದ ಅದು ಲ್ಯಾಪ್ಸ್ ಆಗುತ್ತದೆಂದು ಮತ್ತು ಆ ಹಣವನ್ನು ಬೇರೆ ಉದ್ದೇಶಗಳಿಗೆ ಖರ್ಚ ಮಾಡಿರುವುದನ್ನು ತೋರಿಸುತ್ತಾರೆ. ಅದಕ್ಕೋಸ್ಕರ ಮತ್ತೊಬ್ಬ ಸದಸ್ಯರಾದ ಬಸವರಾಜ್‌ರವರು ಈ ವಿಷಯವನ್ನು ಪ್ರಶ್ನೆ ಮುಖಾಂತರ ಸದನದಲ್ಲಿ ಪ್ರಸ್ತಾಪಿಸಿದಾಗ ಸುಮಾರು 109 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗದ ರೀತಿಯಲ್ಲಿ ಉಳಿದಿತ್ತು. ಇದು ಸರಿಯಲ್ಲವೆಂದು ಇದರ ಬಗ್ಗೆ ಪ್ರೊಟೆಸ್ಟ್ ಕೂಡ ಮಾಡಿದ್ದಾರೆ. ನೀವು ಬೇರೆ ಉದ್ದೇಶಗಳಿಗೆ ಖರ್ಚು ಮಾಡಲು ಆಸಕ್ತಿ ವಹಿಸುತ್ತೀರಿ, ಪರಿಶಿಷ್ಟ ಜಾತಿ/ ವರ್ಗಗಳವರ ಅಭಿವೃದ್ಧಿಗಾಗಿ ಮೀಸಲಿಟ್ಟಂಥ ಹಣ, ಟೈಬಲ್ ಪ್ಲಾನ್‌ನಲ್ಲಿ ಇಟ್ಟಂಥ ಹಣವನ್ನು ಖರ್ಚು ಮಾಡುತ್ತಿಲ್ಲವೆಂದು ಹೇಳಿದ್ದಾರೆ. ಆದರೆ, ಒಂದು ಸಂಪ್ರದಾಯ ಅವರಿಗೂ ಕೂಡ ಗೊತ್ತಿದೆ. ಅವರು ಈ ಹಿಂದೆ ಸಂಸದೀಯ ವ್ಯವಹಾರಗಳ ಸಚಿವರಾಗಿ ಕೆಲಸ ಮಾಡಿದ್ದಾರೆ. ನಮೆಲ್ಲರಿಗಿಂತಲೂ ಅವರು ಬಹಳ ಹಿರಿಯ ಸಚಿವರಾಗಿದ್ದರು, ಅವರು ಸನ್ಮಾನ್ಯ ನಿಜಲಿಂಗಪ್ಪನವರ ಕಾಲದಿಂದಲೂ ಮಂತ್ರಿಯಾಗಿ ಕೆಲಸ ಮಾಡಿದಂತಹವರು. ಆದರೆ, ಇಲ್ಲಿಯವರೆವಿಗೂ ನಾವು ಅಪ್ರೊಪ್ರಿಯೇಷನ್

ಬಿಲ್ ಮೇಲೆ ಮತಕ್ಕೆ ಪ್ರೆಸ್ ಮಾಡಿಲ್ಲ, ಅವರಿಗೂ ಸಹ ಗೊತ್ತಿದೆ. ಒಂದು ವೇಳೆ ವಿಧಾನ ಪರಿಷತ್ತಿನಲ್ಲೂ ಬಹುಮತವಿದ್ದರೂ ಸಹ ಯಾವಾಗಲೂ ಮತಕ್ಕೆ ಒತ್ತಾಯಿಸತಕ್ಕಂಥ ಪದ್ಧತಿಯನ್ನು ನಾವು ಮಾಡಿಕೊಂಡು ಬಂದಿಲ್ಲ. ಆದರೆ, ಅದಕ್ಕೆ ನಮ್ಮ ಪ್ರತಿಭಟನೆ ಇದೆ. The way in which you are doing it, the way in which you are spending the SCP money, the way in which you are looking into the problems of scheduled castes. ಇದರ ಬಗ್ಗೆ ನಮ್ಮೆಲ್ಲರ ಪ್ರತಿಭಟನೆ ಇದೆ. ನಾನು ಅವರಿಗೆ ಕೇಳಿಕೊಳ್ಳುವುದೇನೆಂದರೆ, ಹೊಸ ಸಂಪ್ರದಾಯವನ್ನು ಸೃಷ್ಟಿಸುವುದು ಬೇಡ, ಬೇಕಾದರೆ ಅದನ್ನು ಅನುಷ್ಠಾನಗೊಳಿಸಲೆಂದು ನಾವು ಧರಣಿ ಕೂರೋಣ, ಸತ್ಯಾಗ್ರಹ ಮಾಡೋಣ, ಇದಕ್ಕೆ ಒಪ್ಪಿಗೆ ಇದೆ. ಆದರೆ, ಇಲ್ಲದೇ ಇರತಕ್ಕಂಥ ಸಂಪ್ರದಾಯವನ್ನು ನಾವು ಹುಟ್ಟುಹಾಕುವುದು ಸರಿಯಲ್ಲವೆಂದು ಅವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಬೇರೆ ರೀತಿಯಿಂದ ಪ್ರೊಟೆಸ್ಟ್ ಮಾಡೋಣವೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ : ನಮ್ಮ ಪಕ್ಷದ ನಿಲುವನ್ನು ನಾವು ಸ್ಪಷ್ಟಪಡಿಸಬೇಕಾಗಿದೆ. ಸೆಂಟ್ರಲ್ ಗೌವರ್ನಮೆಂಟ್‌ಗೆ ಇರಬಹುದು, ಕೋರ್ಟ್‌ಗೆ ಇರಬಹುದು, ಪಬ್ಲಿಕ್‌ಗೆ ಇರಬಹುದು, ನಮ್ಮ ಭಾಷಣ ಇರಬಹುದು, ನಾವು ಇದಕ್ಕೆ ವಿರೋಧವಿದ್ದೇವೆ ಎನ್ನುವುದನ್ನು ಹೇಳಬೇಕು. ನಾವು ಡಿವಿಜನ್‌ಗೆ ಪ್ರೆಸ್ ಮಾಡಿರುವುದರಿಂದ ನೀವು ಅದಕ್ಕೆ ಅವಕಾಶ ಕೊಟ್ಟರೆ ಕೊಡಿ, ಇಲ್ಲದಿದ್ದರೆ ನೀವು ಬಿಲ್ಲನ್ನು ಪಾಸ್ ಮಾಡಿಕೊಳ್ಳಿ ನಾವು ಹೊರಗಡೆ ಹೋಗುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವೂ ಸಹ ಇದಕ್ಕೆ ಒಪ್ಪುವುದಿಲ್ಲವಾದ್ದರಿಂದ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಹಾಗೂ ಶ್ರೀ ವೈ. ರಾಮಕೃಷ್ಣರವರ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :-"1997ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಉಪಾಧ್ಯಕ್ಷರು : "ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಮಯಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಮಯ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1997ರ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು : ವಿರೋಧ ಪಕ್ಷದ ನಾಯಕರಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದ ಸಂದರ್ಭದಲ್ಲಿ 'ಪ್ರಧಾನಮಂತ್ರಿಯವರಿಗೆ ಖುಷಿಯಾಗುತ್ತದೆಂದು' ಎಂಬ ಪದವನ್ನು ಏನು ಬಳಸಿದ್ದಾರೆ, ಅದನ್ನು ಕಡತದಿಂದ ತೆಗೆದುಹಾಕಲಾಗಿದೆ.

6.00 ಪಿ.ಎಂ

ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 1997

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1997ರ ಕರ್ನಾಟಕ ವಿಧಾನ ಮಂಡಲದ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.